

ಮಾಡಿದ ಮಾಹಿತಿ ರಂತುಗೆ ಮುಟ್ಟಿಸುವುದು ಇವನ ಜವಾಬ್ದಾರಿ. ರಂತು ಇವನಿಗೆ ಸಂಬಳ ಕೊಟ್ಟು ಒಂದು ಗಾಡಿ ಕೊಡಿಸಿ ಅಲ್ಲಿ ಇರಿಸಿದ್ದಾನೆ. ಈತ ಸ್ಥಳೀಯ ನಿವಾಸಿ. ಇದೇ ಕಾಡಿನ ಪರಿಸರದಲ್ಲಿ ಹುಟ್ಟಿ ಬೆಳೆದ ಪಡ್ಡೆ ಹುಡುಗ. ರಂತು ಇವರ ಕೈಲಿದ್ದ ಚಾಟಿಬಿಲ್ಲು ಕಸಿದು ಬೈನಾಕ್ಯುಲರ್ ಕೊಟ್ಟು ನ್ಯಾಚುರಲಿಸ್ಟ್‌ಗಳಾಗಿ ಬದಲಾಯಿಸಿದ್ದಾನೆ. ಈ ಮುಂಚೆ ಈ ಹುಡುಗ ಇಲ್ಲಿನ ಹಕ್ಕಿಗಳನ್ನು ಚಾಟಿ ಬಿಲ್ಲಲ್ಲಿ ಹೊಡೆದು ಉರುಳಿಸುತ್ತಿದ್ದ. ಇದು ಇವನಿಗೆ ಆಟವಾಗಿತ್ತು. ನಾವು ನೋಡಲು ಹಂಬಲಿಸುವ ಕೆಂಪು ಪಟ್ಟಿಗೆ ಸೇರಿದ ಅಮೂಲ್ಯ ಹಕ್ಕಿಗಳನ್ನೆಲ್ಲಾ ಇವನು ಚಚ್ಚಿ ಕೆಡವಿದ್ದಾನೆ. ಈ ಹಕ್ಕಿಗಳಿರುವ ಪ್ರಾಮುಖ್ಯತೆ ಇವನಿಗೆ ಗೊತ್ತೇ ಇರಲಿಲ್ಲ ಪಕ್ಕಾ ಕೆಲಸವಿಲ್ಲದ ಕುಂದನ್ ರೀತಿಯ ಅನೇಕ ತರುಣರು ಶೋಕಿಗಾಗಿ ಪಕ್ಷಿಗಳನ್ನು ಕೊಲ್ಲುತ್ತಿದ್ದರು. ನಾನು ಯಾಕೆ ಕೊಲ್ಲುತ್ತಿದ್ದೆ ಎಂದು ಕೇಳಿದೆ. "ಈ ಕಾಡಲ್ಲಿ ನಮಗೇನೂ ಮನರಂಜನೆ ಇರಲಿಲ್ಲ. ಆಟವಾಡಲು ಗೆಳೆಯರು ಸಿಗದಷ್ಟು ದೂರದೂರದ ಕಾಡಿನ ಒಂಟಿ ಮನೆಗಳಲ್ಲಿ ಇರುತ್ತಾರೆ. ನಮಗೆ ಇದು ತಪ್ಪು ಎಂದು ಹೇಳುವವರೂ ಇರಲಿಲ್ಲ. ಮನೆಯಲ್ಲಿ ಕೆಲಸವೂ ಇಲ್ಲದ ಹೊತ್ತಿನಲ್ಲಿ ಮಂಗಟ್ಟೆ ತರಹದ ದೊಡ್ಡ ಪಕ್ಷಿಗಳನ್ನು ಕೊಲ್ಲುತ್ತಿದ್ದೆವು. ಗೊತ್ತಿದ್ದವರು ಬಂದು ಮಾಂಸಕ್ಕಾಗಿ ಕೊಂಡೊಯ್ಯುತ್ತಿದ್ದರು. ತಿಳಿದಷ್ಟು ದುಡ್ಡು ಕೊಡುತ್ತಿದ್ದರು. ಆಮೇಲೆ ಪಕ್ಷಿಗಳ ಕಳ್ಳ ಬೇಟೆ ಅಭ್ಯಾಸವಾಗಿ ಹೋಗಿತ್ತು. ಈ ಪಾಪದ ಕೆಲಸ ನಮ್ಮಿಂದ ತಪ್ಪಿಸಿದ ಪುಣ್ಯಾತ್ಮ ರಂತು. ಮಹಾನಂದದಲ್ಲಿ ಬರುವ ವರ್ಷದ ಎಲ್ಲಾ ಪಕ್ಷಿಗಳ ಮಾಹಿತಿಯನ್ನು ಕೊಡುವ ಹೊಸ ಐಡಿಯಾ ಕೊಟ್ಟ. ಈ ಕಾಡಿನಲ್ಲಿ ನಾವು ಒಳ್ಳೆಯವರಾದ ಮೇಲೆ ಬೇಟೆ ನಿಂತು ಹೋಯಿತು. ಈಗ ಪಕ್ಷಿಗಳನ್ನು ಪ್ರಾಣಕ್ಕಿಂತ ಜಾಸ್ತಿ ಪ್ರೀತಿಸ್ತೇವೆ. ಇವುಗಳಿಂದ ಹಣ ದುಡಿಯೋ ಹೊಸ ದಾರಿ ಸಿಕ್ಕಿದೆ. ನಿಮ್ಮಂತೋರು ನೋಡಿ ಎಲ್ಲಿಲ್ಲಿಂದನೋ ಬಂದು ಮಾತಾಡಿಸುತ್ತೀರಿ. ನಿಮ್ಮ ಪ್ರೀತಿನೂ ನಮಗೆ ಸಿಕ್ಕುತ್ತೆ ಪಟ ತೆಗೆಸಿಯುವ ನಿಮ್ಮಂತವರಿಗೆ ಸಹಾಯ ಮಾಡ್ತಾ, ಓಡಾಡ್ತಾ, ಮಾತಾಡ್ತಾ, ನಮ್ಮ ಬದುಕಲ್ಲಿ ರೆಸ್ಪೆಕ್ಟ್ ಬಂದಿದೆ." ಎಂದ. ಅವನ ಕಣ್ಣಲ್ಲಿ ಆತ್ಮೀಯ ನಗುವಿತ್ತು. ಹೆಮ್ಮೆಯಿತ್ತು. ಕಾಡಿನ ಹುಡುಗರ ನೋಡುವ ನೋಟವನ್ನೇ ಬದಲಿಸಿ, ಹವ್ಯಾಸಗಳನ್ನು ತಿದ್ದಿ, ಜವಾಬ್ದಾರಿ ಹೆಚ್ಚಿಸಿದ ರಂತು ಸಾಹು ಒಬ್ಬ ಅಪೂರ್ವ ಮನುಷ್ಯ. ಮಹಾನಂದ ಹಸಿರು ಕಣಿವೆಯ ಪಕ್ಷಿಗಳನ್ನು ಕಳಕಳಿಯಿಂದ ನೋಡುತ್ತಾ ಕಾಪಾಡುವ ಹೊಣೆ ಹೊತ್ತ ಒಂದು ಜನಾಂಗವನ್ನೇ ರಂತು ಈ ಪ್ರಕೃತಿಗೆ ಕೊಡುಗೆಯಾಗಿ ನೀಡಿದ್ದಾನೆ.

ದೇಶದ ಮೂಲೆ ಮೂಲೆಗಳಿಂದ ಜನ ಮಹಾನಂದಕ್ಕೆ ಎಲ್ಲಾ ಋತುಮಾನಗಳಲ್ಲೂ ಬರುತ್ತಾರೆ.